

بسم الله الرّحمٰن الرّحيم

# ಸಹನೆ, ಪ್ರಾರ್ಥನೆ, ದೃಢತೆ ಮತ್ತು ನಮ್ರತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28-04-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಪಾಕಿಸ್ತಾನದಲ್ಲಿ ಅಥವಾ ಬೇರೆ ಜಾಗದಲ್ಲಿ ಜಮಾಅತಿನ ಮೇಲೆ ನಡೆಯುತ್ತಿರುವ ಅವಸ್ಥೆಗೆ ಸಂಬಂಧಿಸಿ ಸಹನೆ ತೋರಿಸುವುದಕ್ಕೆ ಬದಲಾಗಿ ಸ್ವಲ್ಪ ಪ್ರತೀಕಾರ ಮಾಡಬೇಕು ಎಂದು ಹೇಳಿಕೊಂಡು ಶಕ್ತವಾದ ಪುರಾವೆಗಳೊಂದಿಗೆ ಕೆಲವರು ನನಗೆ ಪತ್ರಗಳನ್ನು ಬರೆಯುತ್ತಾರೆ. ಕೆಲವು ಸಂದರ್ಭಗಳಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಪ್ರತಿಕ್ರಿಯೆ ಮಾಡಲು ಅನುಮತಿ ನೀಡಿದ್ದರು ಎಂಬ ಉದಾಹರಣೆಗಳನ್ನು ಕೂಡ ಅವರು ನೀಡುತ್ತಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ)ರಿಗೆ ಸಂಬಂಧಿಸಿ ಹೇಳುತ್ತಿರುವ ಈ ಮಾತುಗಳು ಪೂರ್ಣವಾಗಿಯೂ ತಪ್ಪಾದ ಸಂಗತಿಗಳಾಗಿವೆ. ಅವರು ಕಾನೂನಿನ ಮಿತಿಯಲ್ಲಿ ಇದ್ದುಕೊಂಡು ಕೆಲವು ಸಂಗತಿಗಳನ್ನು ಮಾಡಿದ್ದರು. ಆದರೆ ಏನೂ ಯೋಚಿಸದೇ ಚಿಂತಿಸದೇ ದಂಗೆಗಾರರ ಹಾಗೆ ಮೆರವಣಿಗೆ ನಡೆಸಲು ಅನುಮತಿ ನೀಡಿರಲಿಲ್ಲ. ಎಲ್ಲಿಯಾದರೂ ಏನಾದರೂ ಪ್ರತಿಭಟನೆಯು ಯಾವುದಾದರೂ ರೀತಿಯಲ್ಲಿ ಆಗಿದ್ದರೆ ಅದು ಖಲೀಫತುಲ್ ಮಸೀಹ್‌ರ ಅನುಮತಿಯಿಂದ ಆಗಿತ್ತು. ಅಲ್ಲದೆ ಜನರನ್ನು ಒಟ್ಟುಸೇರಿಸಿ ಪ್ರತಿಭಟನೆ ಆರಂಭಿಸುವ ರೀತಿಯಲ್ಲಿ ಆಗಿರಲಿಲ್ಲ.

ಭಾರತ ವಿಭಜನೆಗೆ ಮುಂಚೆ ಆಂಗ್ಲರ ಆಡಳಿತವಿದ್ದಾಗ, ಮುಸ್ಲಿಹ್ ಮೌಊದ್(ರ)ರ ಭಾಷಣಗಳನ್ನು ಕೆರಳಿಸುವಂತಹದ್ದು ಎಂದು ಹೇಳಿಕೊಂಡು ನಮ್ಮ ವಿರೋಧಿಗಳಾದ ಅಧಿಕಾರಿಗಳು ಅವರ ಮೇಲೆ ಕೈ ಮಾಡಲು ಪ್ರಯತ್ನಿಸುತ್ತಿದ್ದರು. ಆದರೆ ಪ್ರತಿ ಬಾರಿ ಅವರು ಪರಾಜಿತರಾಗುತ್ತಿದ್ದರು. ಏಕೆಂದರೆ, ವಿರೋಧಿಗಳ ಮತ್ತು ಆಡಳಿತದ ಅಧಿಕಾರಿಗಳ ನೈಜ ಮುಖವನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಬಹಿರಂಗಗೊಳಿಸುತ್ತಿದ್ದರು. ಪ್ರವಾದಿಗಳ ಜಮಾಅತುಗಳ ಕೆಲಸ ಸಹನೆದೋರುವುದು ಮತ್ತು ಕಾನೂನನ್ನು ಪಾಲಿಸುವುದಾಗಿದೆ ಎಂದು ಯಾವಾಗಲೂ ಜಮಾಅತ್ತನ್ನು ಉಪದೇಶಿಸುತ್ತಿದ್ದರು. ವಿರೋಧಿ ಅಧಿಕಾರಿಗಳ ಎಲ್ಲ ಕುತಂತ್ರ ಪ್ರಯತ್ನಗಳು ಯಾವಾಗಲೂ ನೀರು ಪಾಲಾಗುತ್ತಿದ್ದುವು. ಇಸ್ಲಾಮ್ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆಗಳಿಗೆ ವಿರುದ್ಧವಾದ ಮಾತುಗಳನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳಿರಲು ಹೇಗೆ ಸಾಧ್ಯ?

ಅನೇಕ ಬಾರಿ ಸಹನೆ ಮತ್ತು ದುಆ ಮಾಡಲು ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದ್ದರು: ದುರ್ಬಲ ಕಾಲುಗಳು ಹೊಂದಿರುವವರು ಮತ್ತು ಮುಳ್ಳಿನ ಮಾರ್ಗಗಳಲ್ಲಿ ನಡೆಯಲು ಸಾಧ್ಯವಿಲ್ಲದವರು ನಿಸ್ಸಂದೇಹವಾಗಿಯೂ ನನ್ನನ್ನು ಬಿಟ್ಟು ಹೋಗಬಹುದಾಗಿದೆ. ಒಟ್ಟಿನಲ್ಲಿ ಲೋಕದ ಮುಂದೆ ಈ ಜಮಾಅತಿನ ವೈಶಿಷ್ಟ್ಯ ಈ ಸಹನೆಯೇ ಆಗಿದೆ.

ಅನೇಕ ಮಾಧ್ಯಮದವರಿಗೂ ನಾನು ಹೆಚ್ಚಾಗಿ ನೀಡುವ ಉತ್ತರವೇನೆಂದರೆ, ನಮಗೆ ತೊಂದರೆಯನ್ನು ನೀಡುತ್ತಿರುವ, ದೌರ್ಜನ್ಯ ಮಾಡುತ್ತಿರುವ ಜನರೇ ನಂತರ ಅಹ್ಮದಿ ಕೂಡ ಆಗಿರುವರು ಮತ್ತು ಇನ್ನಷ್ಟು ಜನರು ಆಗುತ್ತಿದ್ದಾರೆ. ನಮ್ಮ ಸ್ವಭಾವವೂ ಅವರಂತದ್ದೇ ಆಗಿತ್ತು. ನಾವು ಕೂಡ ಅಂತಹ ಪ್ರತಿಕ್ರಿಯೆ ತೋರಿಸಬಹುದಾಗಿದೆ. ಆದರೆ ನಾವು ಕಾಲಘಟ್ಟದ ಇಮಾಮರನ್ನು ನಂಬಿದ್ದೇವೆ. "ನೀವು ಶಾಂತಿಯಿಂದ ಕೆಲಸ ಮಾಡಬೇಕಾಗಿದೆ. ಆದರೆ ಕಾನೂನಿನ ಮಿತಿಯಲ್ಲಿದ್ದುಕೊಂಡು ತಮ್ಮ ಹಕ್ಕುಗಳನ್ನು ಪಡೆಯಲು ಪ್ರಯತ್ನಿಸಬೇಕು" ಎಂಬ ಪಾಠವನ್ನು ಶಾಂತಿ ಸ್ಥಾಪನೆಗಾಗಿ ಮತ್ತು ಅಲ್ಲಾಹನ ಅನುಗ್ರಹಗಳ ವಾರಸುದಾರರಾಗಲು ನೀಡಿರುವರು. ಆದ್ದರಿಂದ ತಿಳಿದಿರಬೇಕಾದ ಸಂಗತಿಯೇನೆಂದರೆ, ಇದು ಪ್ರವಾದಿಗಳ ಚರಿತ್ರೆಯಾಗಿದೆ. ನಾವು ಸಹನೆದೋರಬೇಕು ಎಂದೇ ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಕಲಿಸಿಕೊಟ್ಟಿರುವರು. ಹೇಗಿದ್ದರೂ ಈ ಉತ್ತರದಿಂದ ಜನರು ಅಚ್ಚರಿಪಡುತ್ತಾರೆ. ಶಾಂತಿಯಿಂದ ಇರುವವರ ಯಥಾರ್ಥ ಪ್ರತೀಕಾರ ಇದಾಗಿದೆ ಎಂಬುವುದಾಗಿ ಪ್ರಶಂಸೆಯ ಮಾತುಗಳನ್ನೂ ಹೇಳುತ್ತಾರೆ.

ಸಹನೆಯನ್ನು ಒಂದು ಅತ್ಯಂತ ಮುಖ್ಯ ಸಂಗತಿಯೆಂದು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳಿರುವರು. ಅವರು ಹೀಗೆ ಹೇಳಿರುವರು: ಇದು ಪ್ರವಾದಿಗಳ ಜಮಾಅತುಗಳ ಅತಿ ಪ್ರಧಾನ ಮತ್ತು ಮುಖ್ಯವಾದ ಕಡ್ಡಾಯ ಕರ್ತವ್ಯಗಳಲ್ಲಿ ಒಂದಾಗಿದೆ. ಇದಿಲ್ಲದೇ ಯಾವುದೇ ಜಮಾಅತ್ ಪ್ರಗತಿ ಹೊಂದಲು ಸಾಧ್ಯವಲ್ಲ ಮತ್ತು ಲೋಕವನ್ನು ತನ್ನನ್ನು ಹಿಂಬಾಲಿಸುವಂತೆ ಮಾಡಲು ಸಾಧ್ಯವಲ್ಲ. ಈ ಕಡ್ಡಾಯ ಕರ್ತವ್ಯವನ್ನು ಮಾಡದೇ ಯಶಸ್ಸಿನ ಮುಖವನ್ನು ನೋಡಿದ ಯಾವುದೇ ಜಮಾಅತ್ ದಾಟಿ ಹೋಗಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸಹನೆ ಎರಡು ವಿಧದಲ್ಲಿದೆ. ಒಂದು, ವ್ಯಕ್ತಿಯೊಬ್ಬನಿಗೆ ಪ್ರತೀಕಾರ ಮಾಡಲು ಶಕ್ತಿಯಿದ್ದೂ ಸಹನೆದೋರುವುದಾಗಿದೆ. ಎರಡನೆಯದು, ಎದುರಿಸಲು ಶಕ್ತಿಯೇ ಇಲ್ಲದಿರುವಾಗ ಸಹನೆದೋರುವುದಾಗಿದೆ. ಇದು ಯಾವುದೇ ನಿರ್ವಾಹ ಇಲ್ಲದಿರುವಾಗ ತೋರಿಸುವ ಸಹನೆಯಾಗಿದೆ. ಶಕ್ತಿಯಿದ್ದೂ ತೋರಿಸುವ ಸಹನೆ ಎಂದರೆ, ದೌರ್ಜನ್ಯ ಮಾಡುವವರ ವಿರುದ್ಧ ಪ್ರತೀಕಾರ ಮಾಡದೇ ಇರುವುದು ಮತ್ತು ಅಲ್ಲಾಹನಿಗಾಗಿ ಸಹನೆದೋರುವುದಾಗಿದೆ. ಒತ್ತಡಕ್ಕೆ ಒಳಪಟ್ಟು ಮಾಡುವ ಸಹನೆ ಎಂದರೆ, ಶಕ್ತಿಯಿಲ್ಲದ ಕಾರಣದಿಂದ ಆಕಾಶೀಯ ಆಪತ್ತುಗಳು ಬರುವಾಗ ಅಲ್ಲಾಹನ ಸಂಪ್ರೀತಿಗಾಗಿ ಸಹನೆದೋರುವುದಾಗಿದೆ. ಅಲ್ಲಾಹನು ವಿವಿಧೆಡೆ ಸಹನೆದೋರಲು ಉಪದೇಶ ನೀಡಿದ್ದಾನೆ. ಅಲ್ಲಾಹನ ಆದೇಶಗಳನ್ನು ಮುಂದಿರಿಸಿ ನೋಡುವುದಾದರೆ, ಸಹನೆಯ ಮೂರು ಅರ್ಥಗಳಿವೆ. ಮೊದಲನೆಯದಾಗಿ, ಪಾಪದಿಂದ ರಕ್ಷಣೆ ಪಡೆಯುವುದು ಮತ್ತು ತನ್ನ ಆತ್ಮವನ್ನು ಅದರಿಂದ

ತಡೆಯುವುದು. ಎರಡನೆಯದಾಗಿ, ಸತ್ಕರ್ಮಗಳಲ್ಲಿ ಸ್ಥಿರಚಿತ್ತತೆಯಿಂದ ನೆಲೆನಿಲ್ಲುವುದು. ಮೂರನೆಯದಾಗಿ, ಗೋಳಾಡುವುದು ಮತ್ತು ರೋಧಿಸುವುದರಿಂದ ಬಿಟ್ಟು ನಿಲ್ಲುವುದು. ಮೊದಲ ಅರ್ಥದ ಪ್ರಕಾರ ನಿರಂತರವಾಗಿ ಮತ್ತು ಸ್ಥಿರಚಿತ್ತತೆಯಿಂದ ತನ್ನೆಡೆಗೆ ಸೆಳೆಯುತ್ತಿರುವ ಕೆಡುಕುಗಳಿಂದ ತಡೆದು ನಿಲ್ಲಬೇಕಾಗಿದೆ ಮತ್ತು ಇನ್ನು ಮುಂದೆ ತನ್ನೆಡೆಗೆ ಸೆಳೆಯಬಹುದಾದ ಪಾಪಗಳಿಂದ ರಕ್ಷಣೆ ಪಡೆಯಲು ತಯಾರಾಗಿ ನಿಲ್ಲಬೇಕಾಗಿದೆ. ಎರಡನೇ ಅರ್ಥದ ಪ್ರಕಾರ ಮನುಷ್ಯನು ಗಳಿಸಿರುವ ಒಳಿತುಗಳಲ್ಲಿ ಸ್ಥಿರವಾಗಿ ನಿಲ್ಲಬೇಕಾಗಿದೆ ಮತ್ತು ಆತನಿಗೆ ಇಲ್ಲಿಯ ವರೆಗೂ ಲಭಿಸಿರದ ಒಳಿತುಗಳನ್ನು ಗಳಿಸಲು ಪ್ರಯತ್ನಿಸಬೇಕಾಗಿದೆ. ಇದು ಸಹ ಮನುಷ್ಯನಿಗೆ ಅಲ್ಲಾಹನ ಸಾಮೀಪ್ಯ ನೀಡುವ ಸಹನೆಯ ಒಂದು ವಿಧವಾಗಿದೆ. ಈ ಸಾಮೀಪ್ಯ ದುಆಗಳಿಂದಲೇ ಲಭಿಸಲು ಸಾಧ್ಯ.

ಅಲ್ಲಾಹನು ಹೇಳುತ್ತಾನೆ: **ವಸ್ತಈನೂ ಬಿಸ್ಸಬ್‌ರಿ ವಸ್ಸಲಾತ್. ವ ಇನ್ನಹಾ ಲಕಬೀರತುನ್ ಇಲ್ಲಾ ಅಲಲ್ ಖಾಶಿಈನ್**. ಅಂದರೆ: ಸಹನೆ ಮತ್ತು ಪ್ರಾರ್ಥನೆ ಮೂಲಕ ನೀವು ಅಲ್ಲಾಹನ ಸಹಾಯವನ್ನು ಯಾಚಿಸಿರಿ. ನಿಸ್ಸಂದೇಹವಾಗಿಯೂ ವಿನಯವಂತರಿಗೆ ಹೊರತು ಇತರರಿಗೆ ಇದು ಕಷ್ಟ ಸಾಧ್ಯ. ಅಲ್ಲಾಹನ ಭಯವಿರಿಸುವವರಿಗೆ, ವಿನಯವಂತರಿಗೆ ಮತ್ತು ಅಲ್ಲಾಹನ ಸಂಪ್ರೀತಿಯನ್ನು ಬಯಸುವವರಿಗೆ ಮಾತ್ರ ಇಂತಹ ಸಹನೆಯನ್ನು ತೋರಿಸಲು ಸಾಧ್ಯ.

وَالَّذِيْنَ صَبَرُوا ابْتِغَاءَ وَجْهِ رَبِّهِمْ وَاَقَامُوا الصَّلٰوةَ وَاَنْفَقُوْا مِمَّا رَزَقْنٰهُمْ سِرًّا
وَّعَلَانِيَةً وَّيَدْرَءُوْنَ بِالْحَسَنَةِ السَّيِّئَةَ اُولٰٓئِكَ لَهُمْ عُقْبَى الدَّارِ ○

ಅರ್ಥ: ಅವರು ತಮ್ಮ ಪ್ರಭುವಿನ ಪ್ರೀತಿಯನ್ನು ಆಶಿಸುತ್ತಾ ಸಹನೆದೋರುತ್ತಾರೆ; ನಮಾಝನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೆ; ನಾವು ಅವರಿಗೆ ನೀಡಿದವುಗಳಿಂದ ಗುಪ್ತವಾಗಿಯೂ ಬಹಿರಂಗವಾಗಿಯೂ ವ್ಯಯಿಸುತ್ತಾರೆ; ಕೆಡುಕನ್ನು ಒಳಿತಿನ ಮೂಲಕ ತಡೆಯುತ್ತಾರೆ. ಅಂತಹ ಜನರಿಗೆ ಆ (ಪಾರತ್ರಿಕ) ಗೃಹದ ಅತ್ಯುತ್ತಮ ಪುರಸ್ಕಾರವಿದೆ.

ಒಟ್ಟಿನಲ್ಲಿ, ಸಹನೆ ಎಂಬುವುದು, ಸ್ಥಿರಚಿತ್ತತೆ, ವಿನಯವಂತಿಕೆ ಮತ್ತು ಪ್ರಾರ್ಥನೆಗಳ ಮೂಲಕ ಅಲ್ಲಾಹನ ಸಂಪ್ರೀತಿಯನ್ನು ಗಳಿಸುವುದರ ಹೆಸರಾಗಿದೆ. ನಾವು ನಮ್ಮ ಸ್ಥಿತಿಗಳನ್ನು ಅಲ್ಲಾಹನ ಅಧ್ಯಾಪನೆಗಳ ಪ್ರಕಾರ ಮಾಡುವಾಗ, ನಮ್ಮ ಜೀವನವನ್ನು ಸಾಗಿಸುವಾಗ ಮತ್ತು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವುದು ನಮ್ಮ ಗುರಿಯಾಗುವಾಗ ಅದು ಸಾಧ್ಯವಾಗುವುದು.

ನಾವು ಪ್ರತಿಕ್ರಿಯೆ ತೋರಿಸಿದರೆ ಇನ್ನಷ್ಟು ಕಾಠಿಣ್ಯ ತೋರಿಸಲು ಮತ್ತು ನಮ್ಮ ಜಮಾಅತಿನ ಮೇಲೆ ನಿರ್ಬಂಧಗಳನ್ನು ಹೇರುವ ಪ್ರಯತ್ನವನ್ನು ಮಾಡಲು ಎದುರಾಳಿಗಳು ಬಯಸುತ್ತಾರೆ. ಈಗ ಕೆಲವು ಆಡಳಿತಾಧಿಕಾರಿಗಳು ವಿರೋಧಿಗಳಿಗೆ ಬೆಂಬಲ ನೀಡುತ್ತಿದ್ದಾರೆ. ಆದ್ದರಿಂದ ಪ್ರತೀಕಾರದಿಂದ ಸ್ಥಿತಿಗತಿಗಳು ಹಾಳಾಗುವುವು. ಇಂತಹ ಕೃತ್ಯಗಳ ಕಾರಣದಿಂದ ಜಮಾಅತಿಗೆ ನಷ್ಟವುಂಟಾದ ಘಟನೆಗಳು ಜಮಾಅತಿನ ಚರಿತ್ರೆಯಲ್ಲಿ ಇವೆ. ಆದರೆ ಸಹನೆಯೊಂದಿಗೆ ಅವಸ್ಥೆಗಳನ್ನು ಉತ್ತಮಗೊಳಿಸಲು ಪ್ರಯತ್ನಿಸಲಾದಾಗ ಅದರ ಪ್ರಯೋಜನವೂ ಉಂಟಾಯಿತು. ಈ ರೀತಿಯಾಗಿ ಕೆಲವು ಅಧಿಕಾರಗಳ ಮೇಲೆ ಧನಾತ್ಮಕ ಪ್ರಭಾವ ಸಹ ಉಂಟಾಯಿತು. ನಮ್ಮ ಆಕ್ರಮಣಕಾರಿ ಪ್ರತಿಕ್ರಿಯೆಯಿಂದ ನಾವು ತಬ್ಲೀಗ್ ಮಾಡುತ್ತಿರುವ ವ್ಯಕ್ತಿಗಳ ಮೇಲೂ ಕೆಟ್ಟ ಪ್ರಭಾವ ಉಂಟಾಗುವುದು. ನಾವು ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತಿಗೆ ಬರುವಂತಾಗಲು ಅವರು ಉಂಟುಮಾಡಿದ ಪರಿವರ್ತನೆಯಾದರೂ ಏನು ಎಂದು ಪ್ರಶ್ನಿಸಲು ಅವರಿಗೆ ಅವಕಾಶ ಲಭಿಸುತ್ತದೆ. ಆದ್ದರಿಂದ ಒಂದು ಸಂಗತಿಯನ್ನು ನೆನಪಿಡಿರಿ, ಜಮಾಅತಿನ ದೀರ್ಘಕಾಲೀನ ಲಾಭಕ್ಕಾಗಿ ಕಷ್ಟತೆಗಳನ್ನು ತಾಳ್ಮೆಯೊಂದಿಗೆ ಸಹಿಸಬೇಕು. ಇತರರು ನೀಡುತ್ತಿರುವ ಕಷ್ಟತೆಗಳನ್ನು ತಾಳ್ಮೆಯೊಂದಿಗೆ ಅನುಭವಿಸಬೇಕು ಮತ್ತು ಸಹಿಸಬೇಕು ಎಂದು ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಕಲಿಸಿರುವರು.

ಹಝ್ರತ್ ಪೈಗಂಬರ್(ಸ)ರ ಕಾಲಘಟ್ಟದಲ್ಲಿ ಅನೇಕ ಜನರು ಹಝ್ರತ್ ಪೈಗಂಬರ್(ಸ)ರ ಮತ್ತು ಸಹಾಬಿಯರ ಸಹನೆಯನ್ನು ನೋಡಿಯೇ ಸತ್ಯವಿಶ್ವಾಸವನ್ನು ಕೈಗೊಂಡಿದ್ದರು. ಇಂತಹ ಉದಾಹರಣೆಗಳು ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದಲ್ಲೂ ಲಭಿಸುತ್ತವೆ. ಅನೇಕ ಜನರು ಹಝ್ರತ್ ಮಸೀಹ್ ಮೌಊದ್(ಅ)ರ ಸಹನೆ ಮತ್ತು ಉತ್ತಮ ಸ್ವಭಾವಗುಣಗಳನ್ನು ನೋಡಿಕೊಂಡು ಅವರ ಜಮಾಅತಿನಲ್ಲಿ ಸೇರಿದ್ದರು. ಇಂದಿನ ಸ್ಥಿತಿಯೂ ಇದೇ ಆಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರಿಗೆ ಎದುರಿಸಬೇಕಾದ ಕಷ್ಟತೆಗಳನ್ನೇ ನಮ್ಮ ಜಮಾಅತ್ ಸಹ ಅನುಭವಿಸಬೇಕಾಗುವುದು. ನೆನಪಿಡಿರಿ, ಅಲ್ಲಾಹನ ಮೇಲೆ ದೃಢವಿಶ್ವಾಸ ಉಂಟಾಗಲು ಮತ್ತು ಪರಿಶುದ್ಧ ಬದಲಾವಣೆಯ ಸಂದರ್ಭ ಲಭಿಸಲು ಈ ರೀತಿಯ ಕಷ್ಟತೆಗಳು ಬರಬೇಕಾಗಿದೆ. ನಾನು ನಿಮ್ಮೊಡನೆ ಹೀಗೆಯೂ ಹೇಳುತ್ತೇನೆ; ಅಲ್ಲಾಹನು ಈ ಸಂಗತಿಗೆ ಎಷ್ಟು ಒತ್ತು ನೀಡುತ್ತಿದ್ದಾನೆ ಎಂದರೆ, ವ್ಯಕ್ತಿಯೊಬ್ಬನು ಈ ಜಮಾಅತಿನಲ್ಲಿ ಇದ್ದುಕೊಂಡು ಸಹನೆ ಮತ್ತು ತಾಳ್ಮೆ ತೋರಿಸುವುದಿಲ್ಲವೆಂದಾದರೆ, ಆತನು ನೆನಪಿಡಲಿ, ಆತನು ಈ ಜಮಾಅತಿಗೆ ಸೇರಿದವನಲ್ಲ. ಆದ್ದರಿಂದ ತಮ್ಮ ವಿಷಯಗಳನ್ನು ಅಲ್ಲಾಹನಿಗೆ ಒಪ್ಪಿಸಿರಿ. ಬೈಗುಳಗಳನ್ನು ಕೇಳಿಯೂ ಸಹನೆದೋರಿರಿ. ನಾನು ಸಹನೆ ತೋರಿಸುತ್ತಿರುವಾಗ, ನಿಮ್ಮ ಕೆಲಸ ಸಹ ಸಹನೆದೋರುವುದಾಗಿದೆ.

ಇಂದು ಲೋಕದ ಪ್ರತಿಯೊಂದು ದೇಶದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಸಂದೇಶ ತಲುಪಿದೆ ಮತ್ತು ಜಮಾಅತ್ ಸ್ಥಾಪಿತಗೊಂಡಿದೆ. ಏನು, ಇದು ಯಾವುದೇ ಪ್ರತೀಕಾರ ಅಥವಾ ಶಕ್ತಿ ಪ್ರದರ್ಶನದಿಂದ ಆಗಿತ್ತೇ? ಅಲ್ಲ, ಬದಲಾಗಿ ತ್ಯಾಗ, ಸಹನೆ ಮತ್ತು ಪ್ರಾರ್ಥನೆಗಳ ಕಾರಣದಿಂದ ಆಗಿತ್ತು. ಆದ್ದರಿಂದ ನಾವು ಸಹನೆಯನ್ನು ತೋರಿಸುತ್ತಾ ಮುಂದುವರಿಯಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಮೂಸಾ(ಅ)ರ ಸಮುದಾಯ ಅವರನ್ನು ಬೇಗನೇ ನಂಬಿಕೊಂಡಿತ್ತು. ಆದ್ದರಿಂದ ಅವರಿಗೆ ತನ್ನ ಸಮುದಾಯದ ಕಡೆಯಿಂದ ಯಾವುದೇ ತೊಂದರೆ ಎದುರಿಸಬೇಕಾಗಿ ಬಂದಿರಲಿಲ್ಲ. ಆದರೆ ಹಝ್ರತ್ ಪೈಗಂಬರ್(ಸ)ರಿಗೆ ತನ್ನ ಸಮುದಾಯದಿಂದಲೇ ನಿರಾಕರಣೆ ಮತ್ತು ಕಷ್ಟತೆಗಳನ್ನು ಎದುರಿಸಬೇಕಾಗಿ ಬಂದಿತ್ತು. ಹಝ್ರತ್ ಪೈಗಂಬರ್(ಸ)ರ ಮೇಲೆ ವಿಪತ್ತುಗಳ ಪರಂಪರೆ ಹದಿಮೂರು ವರ್ಷಗಳ ಕಾಲ ಮುಂದುವರೆದಿತ್ತು. ಆದರೆ ಅಲ್ಲಾಹನ ಕಡೆಯಿಂದ ಹಝ್ರತ್ ಪೈಗಂಬರ್(ಸ)ರಿಗೆ ಸಹನೆ ಮತ್ತು ಸ್ಥಿರಚಿತ್ತತೆ ತೋರಿಸಲು ನಿರ್ದೇಶನ ನೀಡಲಾಗಿತ್ತು. ಹಿಂದಿನ ಪ್ರವಾದಿಗಳು ಸಹನೆದೋರಿದಂತೆ ನೀನು ಕೂಡ ಸಹನೆದೋರು ಎಂದು ಪದೇ

ಪದೇ ಆದೇಶ ನೀಡಲಾಗಿತ್ತು. ಹಾಗೆ ಅವರು ನಿರಾಶೆಗೊಳ್ಳದೆ ಮುಂದಡಿಯಿಟ್ಟರು.

ಒಂದು ಗ್ರಾಮದಿಂದ ಅಹ್ಮದಿಯೊಬ್ಬ ಹಝ್ರತ್ ಮಸೀಹ್ ಮೌಊದ್(ಅ)ರ ಸನ್ನಿಧಿಯಲ್ಲಿ ಹಾಜರಾಗಿ ಹೀಗೆ ಹೇಳಿದರು: ನನ್ನ ಗ್ರಾಮದ ಮದ್ರಸಾ ಉದ್ಯೋಗಿಯಾದ ಒಬ್ಬ ಮೌಲವಿ ಕಠಿಣ ವಿರೋಧಿಯಾಗಿರುವನು ಮತ್ತು ನನಗೆ ಬಹಳ ತೊಂದರೆ ಕೊಡುತ್ತಾನೆ. ಹುಝೂರ್, ಅಲ್ಲಾಹನು ಅವನನ್ನು ಅಲ್ಲಿಂದ ಸ್ಥಳಾಂತರಗೊಳಿಸಲಿ ಎಂದು ನೀವು ದುಆ ಮಾಡಿರಿ. ಹಝ್ರತ್ ಮಸೀಹ್ ಮೌಊದ್(ಅ) ಮುಗುಳ್ನಗುತ್ತಾ ಹೇಳಿದರು: ಈ ಜಮಾಅತಿಗೆ ಪ್ರವೇಶಿಸಿರುವಾಗ ಅದರ ಪಾಠಗಳ ಪ್ರಕಾರ ನಡೆಯಿರಿ. ಕಷ್ಟತೆಗಳು ಇಲ್ಲದಿದ್ದರೆ ಪ್ರತಿಫಲ ಹೇಗೆ ಲಭಿಸುವುದು? ಅಲ್ಲಾಹನ ಪೈಗಂಬರ್(ಸ) ಹದಿಮೂರು ವರ್ಷಗಳ ಕಾಲ ದುಃಖವನ್ನು ಅನುಭವಿಸಿದರು. ಆದರೆ ಸಹಾಬಿಯರೊಡನೆ ಸಹನೆದೋರಲು ಉಪದೇಶಿಸಿದರು. ಅಲ್ಲಾಹನ ಪರಿಶುದ್ಧ ಜಮಾಅತ್ ಲೋಕದಲ್ಲಿ ಹರಡಲು ಅಲ್ಲಾಹನು ಉದ್ದೇಶಿಸಿದ್ದಾನೆ. ಅಲ್ಲಾಹನು ನಿಮಗೆ ವಿರೋಧಿಗಳ ಮೂಲಕ ಸಹನೆಯ ಪಾಠವನ್ನು ಕಲಿಸಲು ಬಯಸುತ್ತಾನೆ. ಇದು ಏನೂ ಅಲ್ಲವೆಂದು ಸ್ವಲ್ಪ ಕಾಲದ ಸಹನೆಯ ನಂತರ ನೋಡುವಿರಿ. ದುಃಖ ನೀಡುವವನು ಪಶ್ಚಾತ್ತಾಪ ಪಡುವನು ಅಥವಾ ನಾಶ ಹೊಂದುವನು. ಸಹನೆದೋರುವವನಿಗೆ ಲೆಕ್ಕವಿಲ್ಲದಷ್ಟು ಪ್ರತಿಫಲ ಲಭಿಸುವುದು ಎಂದು ಅಲ್ಲಾಹನು ಹೇಳುತ್ತಾನೆ. ಲೌಕಿಕ ಜನರು ಲೌಕಿಕ ವಸ್ತುಗಳ ಮೇಲೆ ಭರವಸೆ ಇರಿಸುತ್ತಾರೆ. ಆದರೆ ಅಲ್ಲಾಹನು ಯಾವುದೇ ಒತ್ತಡಕ್ಕೆ ಸಿಲುಕಿಕೊಂಡವನಲ್ಲ. ಆದ್ದರಿಂದ ತಮ್ಮ ಕೃತ್ಯಗಳನ್ನು ಪರಿಶುದ್ಧಗೊಳಿಸಿರಿ, ಅಸಡ್ಡೆ ತೋರಿಸಬೇಡಿರಿ. ಅಸಡ್ಡೆ ತೋರಿಸುವವನು ಶೈತಾನನಿಗೆ ಬಲಿಯಾಗುತ್ತಾನೆ. ಪಶ್ಚಾತ್ತಾಪ ಮಾಡುವುದನ್ನು ಸದಾ ಜೀವಂತವಾಗಿ ಇರಿಸಿರಿ. ಅದು ವ್ಯರ್ಥವಾಗದಿರಲಿ. ಯಥಾರ್ಥ ಪಶ್ಚಾತ್ತಾಪ ಉತ್ತಮ ಬೀಜದ ಹಾಗೆ ಆಗಿರುತ್ತದೆ. ಅದು ಸರಿಯಾದ ಸಮಯದಲ್ಲಿ ಫಲವನ್ನು ನೀಡುತ್ತದೆ. ನಾನು ಅಲ್ಲಾಹನ ಕಡೆಯಿಂದ ಸಹನೆದೋರಿಸಲು ಕಳುಹಿಸಲ್ಪಟ್ಟಿದ್ದೇನೆ. ನೀವು ಅವರಿಗಾಗಿ ದುಆ ಮಾಡಿರಿ. ಅಲ್ಲಾಹನು ಅವರಿಗೂ ಸನ್ಮಾರ್ಗ ನೀಡಲಿ.

ಆದ್ದರಿಂದ ನಾವು ಹಝ್ರತ್ ಮಸೀಹ್ ಮೌಊದ್(ಅ)ರ ಹೆಜ್ಜೆಗುರುತನ್ನು ಹಿಂಬಾಲಿಸುವುದರಲ್ಲೇ ನಮ್ಮ ಯಶಸ್ಸು ಇರುವುದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇಸ್ತಿಗ್ಫಾರ್, ತೌಬಃ, ಧಾರ್ಮಿಕ ಜ್ಞಾನದ ಅರಿವು, ಅಲ್ಲಾಹನ ಮಹತ್ವವನ್ನು ಮುಂದಿರಿಸುವುದು ಮತ್ತು ಐದು ಹೊತ್ತಿನ ನಮಾಝ್‌ಗಳನ್ನು ನಿರ್ವಹಿಸುವುದು ಇವುಗಳು ನಾವು ವಿಜಯ ಸಾಧಿಸಲು ಬೇಕಾದ ಆಯುಧಗಳಾಗಿವೆ. ಒಟ್ಟಿನಲ್ಲಿ, ನಮ್ಮ ವಿಜಯ ಮತ್ತು ಪ್ರಗತಿಯ ಬುನಾದಿ ಈ ಉಪದೇಶಗಳಾಗಿವೆ. ಹಝ್ರತ್ ಮಸೀಹ್ ಮೌಊದ್(ಅ)ರ ನಿರ್ದೇಶನದ ಪ್ರಕಾರ ನಾವು ಸರಿಯಾದ ರೀತಿಯಲ್ಲಿ ಈ ಉಪದೇಶಗಳಿಗೆ ಗಮನ ನೀಡುತ್ತಾ ಇರುವುದರಲ್ಲಿ ನಮ್ಮ ವಿಜಯವಿದೆ. ನಮ್ಮ ವಿಜಯ ವಿಧಿಸಲ್ಪಟ್ಟದ್ದಾಗಿದೆ – ಇನ್‌ಶಾ ಅಲ್ಲಾಹ್. ಪ್ರತಿಯೊಬ್ಬ ಅಹ್ಮದೀ ತನ್ನ ಹೊಣೆಗಾರಿಕೆಯನ್ನು ಅರಿತರೆ ಅನೇಕ ಸಮ್ಯಸೆಗಳನ್ನು ನಮ್ಮ ವರ್ತನೆಗಳ ಮತ್ತು ದುಆಗಳ ಮೂಲಕ ಬಗೆಹರಿಸಬಹುದಾಗಿದೆ.

ಅಲ್ಲಾಹನು ನಮಗೆ ಸಹನೆ, ತಾಳ್ಮೆ ಮತ್ತು ದುಆಗಳನ್ನು ಮಾಡಲು ಸೌಭಾಗ್ಯ ನೀಡಲಿ ಹಾಗೂ ಅವನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಈ ಮಾತುಗಳ ಪ್ರಕಾರ ನಡೆಯಲು ಸೌಭಾಗ್ಯಯನ್ನು ದಯಪಾಲಿಸಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***
*At, **'Masjid Mubarak'**, Islamabad, Tilford, UK. On 28-04-2023*
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
**Email**: *khutuba.kannada@gmail.com*
**You can find all the Sermons archived at**: www.alislam.org/friday-sermon